**ದಿನಾಂಕಃ13-01-2023 ರಂದು (ಪಿ.ಡಬ್ಲ್ಯೂ.2) ಇವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ. ಬಿ.ಆರ್.ಎಮ್. ವಕೀಲರಿಂದಃ-**

10. ಫಿರ್ಯಾದಿದಾರರಿಗೆ ಸಂಬಂಧಪಟ್ಟಂತೆ ಯಾವ ಕೆಲಸ ಆರೋಪಿತನ ಕಛೇರಿಯಲ್ಲಿ ಬಾಕಿ ಇತ್ತು ಎನ್ನುವ ಬಗ್ಗೆ ದಾಖಲೆ ನೋಡಿರುತ್ತೀರಾ ಎಂದರೆ ನಾನು ನೋಡಿರುವುದಿಲ್ಲ. ಆರೋಪಿ ತಹಶೀಲ್ದಾರ ಕಛೇರಿಯಲ್ಲಿ ಗ್ರಾಮ ಲೇಖಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ. ಆರೋಪಿಯ ಬಳಿ ಫಿರ್ಯಾದಿದಾರನ ಯಾವ ಕೆಲಸ ಬಾಕಿ ಇತ್ತು ಎಂದು ನನಗೆ ಮಾಹಿತಿ ಇಲ್ಲ. ಆರೋಪಿ ಫಿರ್ಯಾದಿದಾರನಿಗೆ ಕೆಲಸ ಮಾಡಿಕೊಡುವ ಮುನ್ನ ಹಣ ಬೇಡಿಕೆ ಇಟ್ಟ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ನನ್ನ ಸಮಕ್ಷಮ ಲೋಕಾಯುಕ್ತ ಕಛೇರಿಯವರು ಆರೋಪಿಯ ಕಡೆಯಿಂದ ಫಿರ್ಯಾದಿದಾರನಿಗೆ ಸಂಬಂಧಪಟ್ಟ ದಾಖಲೆಗಳನ್ನು ಜಪ್ತಿ ಮಾಡಿಕೊಂಡಿರುವುದಿಲ್ಲ ಅಂದರೆ ಸರಿ. ಎ.ಸಿ. ಕಛೇರಿಯಲ್ಲಿ ಸಂದರ್ಶಕರ ಪುಸ್ತಕ ಇದ್ದು ಅದರಲ್ಲಿ ಸಾರ್ವಜನಿಕರು ಯಾರು, ಯಾರಿಗೆ ಬೇಟಿಯಾಗುತ್ತಿದ್ದಾರೆ ಎಂದು ನಮೂದು ಮಾಡಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಲೋಕಾಯುಕ್ತ

ಕಛೇರಿಯಲ್ಲಿ ಇಲಾಖಾ ವಿಚಾರಣೆ ನಂ.27/2016 ರಲ್ಲಿ ದಿಃ 02-03-2018 ರಂದು ವಿಚಾರಣೆಯಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ದಿನಾಂಕಃ 01-06-2018 ರಂದು ಪಾಟೀ ಸವಾಲು ಮಾಡಿದ್ದು ಅದರಲ್ಲಿ ಆರೋಪಿ ನಂ.1 ನನ್ನ ಸಮಕ್ಷಮ ಲಂಚದ ಹಣ ಕೇಳಿಲ್ಲಾ ಎಂದರೆ ಸರಿ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಈ ಪ್ರಕರಣದಲ್ಲಿ ಮುಖ್ಯ ವಿಚಾರಣೆಯಲ್ಲಿ ಪ್ಯಾರಾ 7 ರಲ್ಲಿ ಹೇಳಿದ " ಆ ನಂತರ ಲೋಕಾಯುಕ್ತ ಪಿ.ಐ. ರವರು ಫಿರ್ಯಾದಿದಾರನಿಗೆ ಫೋನ್ ಮಾಡಿ ಅವರು ಇದ್ದಂತಹ ಸ್ಥಳಕ್ಕೆ ಕರೆಯಿಸಿಕೊಂಡು ಫಿರ್ಯಾದಿದಾರನ ಕಡೆಯಿಂದ 2ನೇ ಆರೋಪಿಯಾದ ಸಿದ್ದಯ್ಯ ರವರಿಗೆ ಫೋನ್ ಮಾಡಿ ಅಂತಾ ತಿಳಿಸಿದರು" ಎಂದು ಹೇಳಿದ ವಿಚಾರ ಲೋಕಾಯುಕ್ತ ಕಛೇರಿಯಲ್ಲಿ ಇಲಾಖಾ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಆ ಬಗ್ಗೆ ನನಗೆ ನೆನಪು ಇರುವುದಿಲ್ಲ. ಈಗ ಸಾಕ್ಷಿದಾರರಿಗೆ ಇಲಾಖಾ ವಿಚಾರಣೆಯ ಹೇಳಿಕೆಯನ್ನು ಓದಿ ಹೇಳಿ ಅಂತಾ ಕೊಟ್ಟಿದ್ದು ಅದರಲ್ಲಿ ಮೇಲೆ ಹೇಳಿದ ವಿಷಯ ಇರುವುದಿಲ್ಲ ಎಂದರೆ ಸರಿ ಎಂದು ಹೇಳುತ್ತಾರೆ. ಈ ಪ್ರಕರಣದಲ್ಲಿ ಮುಖ್ಯ ವಿಚಾರಣೆಯಲ್ಲಿ ಹೇಳಿದ " 2ನೇ ಆರೋಪಿಯು ಮತ್ತೊಮ್ಮೆ ಫೋನ್ ಮಾಡಿದ್ದೇನೆ 1ನೇ ಆರೋಪಿಗೆ ನೀವು ಮತ್ತೊಮ್ಮೆ ಹಣ ತೆಗೆದುಕೊಂಡು ಅವನ ಬಳಿಗೆ ಹೋಗಿರಿ" ಎಂದು ಹೇಳಿರುವಂತಹ ವಿಷಯವನ್ನು ಲೋಕಾಯುಕ್ತ ಇಲಾಖಾ ವಿಚಾರಣೆಯಲ್ಲಿ ಹೇಳಿರುವುದಿಲ್ಲ ಎಂದರೆ ಆ ಬಗ್ಗೆ ಬಹಳ ದಿವಸ ಆದ ಬಗ್ಗೆ ಆ ವಿಚಾರ ಕೇಳಿದ ಬಗ್ಗೆ ಹೇಳಿದ ಬಗ್ಗೆ ನನಗೆ ನೆನಪಿರುವುದಿಲ್ಲ.

11. ದಿಃ 30-10-2010 ರಂದು ಲೋಕಾಯುಕ್ತ ಕಛೇರಿಯಿಂದ ನಮ್ಮ ಕಛೇರಿಗೆ ಪತ್ರ ಬಂದಿದ್ದು ಆ ದಿನ ಕಛೇರಿಗೆ ಹಾಜರಾದ ಬಗ್ಗೆ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುತ್ತಿರಾ ಎಂದರೆ ಬಹಳ ದಿನ ಆದ ಕಾರಣ ನನಗೆ ನೆನಪಿರುವುದಿಲ್ಲ. ದಿಃ 30-10-2010 ರಂದು ನಾನು ಲೋಕಾಯುಕ್ತ ಕಛೇರಿಗೆ ಹೋದ ಬಗ್ಗೆ ನಮ್ಮ ಶಾಲೆಯಲ್ಲಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ನಮ್ಮ ಮೇಲಾಧಿಕಾರಿಗಳ ಆದೇಶ ಪ್ರತಿ ಇರುತ್ತದೆ. ನಮ್ಮ ಶಾಲೆಯ ಹಾಜರಾತಿ ಪುಸ್ತಕದಲ್ಲಿ ನಾವು ಹೊರಗಡೆ ಯಾವುದಾದರೋ ನಿಯೋಜನೆಯ ಮೇಲೆ ಹೋದರ ಅದರ ಬಗ್ಗೆ ನಮೂದು ಮಾಡುತ್ತಾರೆ.

ಅಂತಹ ದಾಖಲೆಗಳನ್ನು ಲೋಕಾಯುಕ್ತ ಪೊಲೀಸರಿಗೆ ತನಿಖಾ ಕಾಲದಲ್ಲಿ ಕೊಟ್ಟಿರುವುದಿಲ್ಲ ಎಂದರೆ ಸರಿ.

12. ಲೋಕಾಯುಕ್ತ ಕಛೇರಿಯಲ್ಲಿ ಆರೋಪಿ ಮತ್ತು ಫಿರ್ಯಾದಿದಾರರ ಮಧ್ಯದಲ್ಲಿ ಆದ ಸಂಭಾಶಣೆಯನ್ನು ಮೋಬೈಲ ಮತ್ತು ವೈಸ ರಿಕಾರ್ಡನಲ್ಲಿ ದಾಖಲಾಗಿದ್ದನ್ನು ಸಿ.ಡಿ.ಗೆ ವರ್ಗಾಯಿಸಿದ ಮೇಲೆ, ಸಿ.ಡಿ.ಯನ್ನು ಜಪ್ತಿಪಡಿಸಿದ ನಂತರ ಅವುಗಳನ್ನು ಮತ್ತೆ ಸೀಲ್ ಮಾಡಿದ್ದನ್ನು ನಮ್ಮ ಮುಂದೆ ಮತ್ತೆ ಯಾವತ್ತು ಒಡೆದು ಸೀಲ ಮಾಡಿರುವುದಿಲ್ಲ, ನಾನು ಲೋಕಾಯುಕ್ತರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ವಿಶೇಷ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.

This document was created with the Win2PDF “print to PDF” printer available at
http://www.win2pdf.com

This version of Win2PDF 10 is for evaluation and non-commercial use only.

This page will not be added after purchasing Win2PDF.

http://www.win2pdf.com/purchase/